# ವಯಸ್ಕರ ಸಬ್ಬತ್ತು ಶಾಲಾ ಸತ್ಯವೇದ ಅಧ್ಯಯನ ಮಾರ್ಗದರ್ಶಿ

## ಪ್ರಕಟನೆ ಪುಸ್ತಕ

**ಮೊದಲನೇ ತ್ರೈಮಾಸಿಕ**

**ಜನವರಿ, ಫೆಬ್ರವರಿ, ಮಾರ್ಚ್ 2019**

ಆಂಗ್ಲ ಮೂಲ : **ರ್ಯಾಂಕೋ ಸ್ಟೆಫನೋವಿಕ್**

ಕನ್ನಡ ಭಾವಾನುವಾದ :

**ಅಂತೋಣಿ ರಾಜ್ ಹೆನ್ರಿ ಮತ್ತು ಚಿನ್ನಪ್ಪ**

# ವಯಸ್ಕರ ಸಬ್ಬತ್ತು ಶಾಲಾ ಸತ್ಯವೇದ ಅಧ್ಯಯನ ಮಾರ್ಗದರ್ಶಿ

## ಮೊದಲನೇ ತ್ರೈಮಾಸಿಕ – ಜನವರಿ, ಫೆಬ್ರವರಿ, ಮಾರ್ಚ್ 2019

## ಅನುಕ್ರಮಣಿಕೆ


1. ಪತ್ಮೋಸ್‌ನಿಂದ ಸುವಾರ್ತೆ — ಡಿಸೆಂಬರ್ 29, 18
2. ದ್ವೀಪ ಸ್ಥಂಭಗಳ ನಡುವೆ — ಜನವರಿ 5 2019
3. ಏಳು ಸಭೆಗಳಿಗೆ ಯೇಸುವಿನ ಸಂದೇಶಗಳು — ಜನವರಿ, 12
4. ಯೋಗ್ಯವಾದ ಕುರಿಮರಿ — ಜನವರಿ, 19
5. ಏಳು ಮುದ್ರೆಗಳು — ಜನವರಿ, 26
6. ಮುದ್ರೆ ಹೊಂದಿದ ದೇವಜನರು — ಫೆಬ್ರವರಿ, 2
7. ಏಳು ತುತೂರಿಗಳು — ಫೆಬ್ರವರಿ, 9
8. ಸೈತಾನ ಒಬ್ಬ ಸೋಲಿಸಲ್ಪಟ್ಟ ಶತ್ರು — ಫೆಬ್ರವರಿ, 16
9. ಸೈತಾನನು ಮತ್ತು ಅವನ ಮಿತ್ರರು — ಫೆಬ್ರವರಿ, 23
10. ದೇವರ (ನಿತ್ಯ) ಶಾಶ್ವತ ಸುವಾರ್ತೆ — ಮಾರ್ಚ್, 2
11. ಕೊನೆಯ ಏಳು ಉಪದ್ರವಗಳು — ಮಾರ್ಚ್, 16
12. ಬಾಬಿಲೋನಿನ ಮೇಲೆ ನ್ಯಾಯತೀರ್ಪು — ಮಾರ್ಚ್, 23
13. ನಾನು ಎಲ್ಲವನ್ನು ಹೊಸದಾಗಿ ಮಾಡುತ್ತೇನೆ — ಮಾರ್ಚ್, 30



**ಆಂಗ್ಲ ಮೂಲ : ರ್‍ಯಾಂಕೋ ಸ್ಟೆಫನೋವಿಕ್**

**ಕನ್ನಡ ಭಾವಾನುವಾದ :**
**ಅಂತೋಣಿ ರಾಜ್ ಹೆನ್ರಿ ಮತ್ತು ಚೆನ್ನಪ್ಪ**


**(ವಿ.ಸೂ : ಖಂಡಿತವಾಗಿಯೂ ಖಾಸಗಿ ಉಪಯೋಗಕ್ಕಾಗಿ ಮಾತ್ರ)**

# ಪತ್ಮೋಸ್‌ನಿಂದ್ ಸುವಾರ್ತೆ

## ಪೀಠಿಕೆ : ಬಹಿರಂಗ ಪುಸ್ತಕ –

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಅಪೋಸ್ತಲನಾದ ಯೋಹಾನನು ಸುವಾರ್ತೆಗೆ ನಂಬಿಗಸ್ತ ಸಾಕ್ಷಿಯಾದ ಕಾರಣದಿಂದಾಗಿ ಏಜಿಯನ್ ಸಮುದ್ರದಾಚೆಯಲ್ಲಿ ಅವನನ್ನು ಗಡಿಪಾರು ಮಾಡಲಾಯಿತು. ವಯಸ್ಸಾದ ಅಪೋಸ್ತಲನು ರೋಮನ್ ಸೆರೆವಾಸದ ಎಲ್ಲ ಕಷ್ಟಗಳನ್ನು ಅನುಭವಿಸಿದನು. ಒಂದು ನಿರ್ದಿಷ್ಟ ಸಬ್ಬತ್ತಿನಲ್ಲಿ ಯೇಸುಕ್ರಿಸ್ತನ ವಿಶೇಷ ಭೇಟಿಯನ್ನು ಅವನು ಪಡೆದನು. ಆತನು ತನ್ನ ಸೇವಕನ ನೋವಿನಲ್ಲಿ ಪ್ರೋತ್ಸಾಹಿಸಲು ಬಂದನು. ದರ್ಶನಗಳ ಸರಣಿಗಳಲ್ಲಿ ಯೇಸು ಅವನಿಗೆ ಸಭೆಯ ಸರ್ವತೋಮುಖ ದೃಶ ಇತಿಹಾಸವನ್ನು ತೋರಿಸಿದನು ಮತ್ತು ದೇವರ ಜನರು ತಮ್ಮ ಕರ್ತನ ಆಗಮನಕ್ಕಾಗಿ ಕಾಯುತ್ತಿದ್ದ ಯಾವ ಅನುಭವ ಹೊಂದಿದರು.

ಯೋಹಾನನು ದರ್ಶನದಲ್ಲಿ ಕಂಡಿದ್ದನ್ನು ಪ್ರಾಮಾಣಿಕವಾಗಿ ಸುರುಳಿಯಲ್ಲಿ 'ಯೇಸುಕ್ರಿಸ್ತನ ಪ್ರಕಟನೆ' ಎಂಬ ಶಿರೋನಾಮದಡಿಯಲ್ಲಿ ದಾಖಲಿಸಿದ್ದಾನೆ (ಪ್ರಕಟನೆ 1:1). ಅವನು ಬರೆದಿರುವ ಪುಸ್ತಕವು ಯೇಸುವಿನ ಕೆಲಸವನ್ನು ಪರಲೋಕದಲ್ಲಿ ಮತ್ತು ಭೂಮಿಯ ಮೇಲೆ ಆತನ ಆರೋಹಣದಿಂದ ಪ್ರಕಟಿಸುತ್ತದೆ ಮತ್ತು ಅವರು ಹಿಂತಿರುಗಿ ಬಂದಾಗ ಏನು ಮಾಡುತ್ತಾರೆ.

ಕ್ರೈಸ್ತರಿಗೆ ಕ್ರಿಸ್ತನ ಸಮ್ಮುಖದ ಕಾಲದಿಂದಲೂ ಭರವಸೆ ನೀಡಲು ಉದ್ದೇಶಿಸಿತ್ತು ಮತ್ತು ಬಿದ್ದು ಹೋಗಿರುವ ಲೋಕವು ಮಹಾಹೋರಾಟದಲ್ಲಿ ಮುಳುಗಿರುವುದರ ನಡುವೆ ಅವರ ಪ್ರತಿನಿತ್ಯದ ಶೋಧನೆಗಳ ಅನುಭವದಿಂದ ಅವರನ್ನು ಸಂರಕ್ಷಣೆ ಮಾಡುವುದಾಗಿತ್ತು.

ಈ ತ್ರೈಮಾಸಿಕದಲ್ಲಿ, ನಾವು ಈ ಪುಸ್ತಕವನ್ನು ಪರಿಶೀಲಿಸುತ್ತೇವೆ, ಸವಿಸ್ತಾರವಾಗಿ ನಾವು ಈ ಪುಸ್ತಕದ ಪ್ರಮುಖ ಭಾಗಗಳು ಮತ್ತು ವಿಷಯಗಳ ಮೇಲೆ ಕೇಂದ್ರೀಕರಿಸುತ್ತೇವೆ. ಈ ಪುಸ್ತಕದ ಪ್ರಮುಖ ವಿಷಯಗಳ ಬಗ್ಗೆ ಪರಿಚಿತವಾಗುವ ಭಾವನೆಯಿಂದ ಅದನ್ನು ನೋಡುತ್ತೇವೆ, ನಿಜವಾಗಿಯೂ, ಯೇಸುಕ್ರಿಸ್ತನು ತನ್ನ

ಜನರ ಪರವಾಗಿ, ಆತನ ಜೀವನ, ಮರಣ, ಪುನರುತ್ಥಾನ ಮತ್ತು ಆತನ ಮಹಾಯಾಜಕ ಸೇವೆಯನ್ನು ಪ್ರಕಟಿಸುತ್ತದೆ.

ನಾವು ಹಾಗೆ ಮಾಡಿದಂತೆಯೇ, ನಾವು ಈ ಕೆಳಗಿನ ವಿಧಾನಗಳಲ್ಲಿ ಮುಂದುವರೆಯುತ್ತೇವೆ :

1. ನಮ್ಮ ಪ್ರಕಟನೆ ಅಧ್ಯಯನವು ಸತ್ಯವೇದದ, ಸ್ಫೂರ್ತಿದಾಯಕವಾದ ಸತ್ಯವೇದದ ಸಾಮಾನ್ಯ ಜ್ಞಾನದ ಮೇಲೆ ಆಧಾರವಾಗಿದೆ. ಪುಸ್ತಕದ ಸಂದೇಶವು ದೇವರಿಂದ ಬಂದಾಗ ಮನುಷ್ಯನ ಭಾಷೆಯಲ್ಲಿ ಅವುಗಳನ್ನು ತಿಳಿಸಲಾಯಿತು. ಹಳೆಯ ಒಡಂಬಡಿಕೆಯಲ್ಲಿರುವ ದೇವರ ಜನರ ಇತಿಹಾಸದಿಂದ ಭಾಷೆ ಮತ್ತು ಚಿತ್ರಗಳನ್ನು ಸಂಗ್ರಹಿಸಲಾಗಿದೆ. ಯೋಹಾನನು ಆ ಸಂದೇಶಗಳನ್ನು ನಮಗೆ ಹೇಗೆ ತಿಳಿಯಪಡಿಸುತ್ತಿದ್ದಾನೆ ಎಂದು ಕಂಡುಕೊಳ್ಳುತ್ತೇವೆ.

2. ಪ್ರಕಟನೆ ಪ್ರವಾದನೆಗಳನ್ನು ಎಚ್ಚರಿಕೆಯಿಂದ ಓದುವುದು (ದಾನಿಯೇಲನಂತೆಯೇ) ಪ್ರವಾದನೆಯ ವಾಗ್ದಾನವನ್ನು ಐತಿಹಾಸಿಕ ವಿಧಾನದಲ್ಲಿ ಅರ್ಥ ಮಾಡಿಕೊಳ್ಳುವುದು ಸರಿಯಾದ ಮಾರ್ಗವಾಗಿದೆ ಎಂದು ತೋರಿಸುತ್ತದೆ. ಏಕೆಂದರೆ ಅದು ಪ್ರವಾದಿಯ ಕಾಲದಿಂದ ಪ್ರಪಂಚದ ಅಂತ್ಯದವರೆಗೆ ಇತಿಹಾಸದ ಹರಿವನ್ನು ಅನುಸರಿಸುತ್ತದೆ.

3. ಪ್ರಕಟನೆಯ ಸುವ್ಯವಸ್ಥಿತ ರಚನೆಯು ಅನೇಕ ವಿಧಗಳಲ್ಲಿ ಈ ಪುಸ್ತಕ ಪ್ರವಾದನೆಗಳ ಜವಾಬ್ದಾರಿಯುತ ಅನ್ವಯಕ್ಕೆ ನಿರ್ಣಾಯಕವಾಗಿದೆ. ಪ್ರಕಟನೆಯ ನಮ್ಮ ವಿಶ್ಲೇಷಣೆಯು ಪುಸ್ತಕದ ನಾಲ್ಕು ಹಂತದ ರಚನೆಯನ್ನು ಆಧರಿಸುತ್ತದೆ.

   ಎ) ಪ್ರಕಟನೆ 1:1–3:22 ಯೋಹಾನನ ದಿನದ ಸಭೆಗಳ ಪರಿಸ್ಥಿತಿಯನ್ನು ಇತಿಹಾಸದ ವಿಭಿನ್ನ ಅವಧಿಗಳಿಗೆ ಪ್ರವಾದನ ಪೂರಕವಾಗಿ ಸಭೆಯ ಪರಿಸ್ಥಿತಿಗೆ ತಕ್ಕಂತೆ ಸಂಬೋಧಿಸುತ್ತದೆ.

ಬಿ) ಪ್ರಕಟನೆ 4:1–11:19 ಪುನರುಚ್ಚರಿಸು (ಸಾರಾಂಶ ಹೇಳು) ಮತ್ತು ಸಭೆಯ ಇತಿಹಾಸವನ್ನು ನಿರ್ಮಿಸಲು, ಅಪೋಕ್ಯಾಲಿಪ್ಸ್‌ನ ಸಂಕೇತಗಳನ್ನು ಬಳಸಿ ಕ್ರಮೇಣವಾಗಿ ಹೆಚ್ಚು ವಿವರಗಳನ್ನು ಸೇರಿಸಿದೆ.

ಸಿ) ಪ್ರಕಟನೆ 12:1–14:20 ಪುಸ್ತಕದ ವಿಷಯಾಧಾರಿತ ಕೇಂದ್ರ ಮತ್ತು ಯೇಸುವಿನ ಎರಡನೇ ಆಗಮನಕ್ಕೆ ಮುಂಚಿತವಾಗಿಯೇ ದೊಡ್ಡ ವಿವಾದದ ಇತಿಹಾಸವನ್ನು ವ್ಯಾಪಿಸಿದೆ.

ಡಿ) ಪ್ರಕಟನೆ 15:1–22:21 ಅಂತ್ಯಕಾಲವನ್ನು ಪ್ರತ್ಯೇಕವಾಗಿ ಕೇಂದ್ರೀಕರಿಸುತ್ತದೆ.

4. ಪ್ರಕಟನೆಯ ಪ್ರವಾದನೆಗಳ ಅರ್ಥಪೂರ್ಣ ವ್ಯಾಖ್ಯಾನವು ಕ್ರಿಸ್ತನ ಮೇಲೆ ಮಾತ್ರ ಕೇಂದ್ರೀಕೃತವಾಗಿರಬೇಕು. ಇಡೀ ಪುಸ್ತಕವು ಕ್ರಿಸ್ತನ ದೃಷ್ಟಿಕೋನದಿಂದ ಬರೆಯಲ್ಪಟ್ಟಿತು. ಕ್ರಿಸ್ತನ ಮೂಲಕ ಮಾತ್ರ ಪ್ರಕಟನೆಯ ಚಿಹ್ನೆಗಳು ಮತ್ತು ಚಿತ್ರಗಳು ತಮ್ಮ ಅಂತಿಮ ಅರ್ಥ ಮತ್ತು ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಪ್ರಕಟನೆಯ ವಾಕ್ಯಗಳನ್ನು ಓದುವ ಅಥವಾ ಕೇಳುವವರಿಗೆ ಮತ್ತು ಅದರಲ್ಲಿ ಕಂಡುಬರುವ ಎಚ್ಚರಿಕೆಗಳನ್ನು ಗಮನದಲ್ಲಿರಿಸಿಕೊಳ್ಳುವವರಿಗೆ ಆಶೀರ್ವಾದದ ಭರವಸೆಯನ್ನು ನೀಡುತ್ತದೆ. "ಪ್ರಕಟನೆ ಪುಸ್ತಕವು ಅದರಲ್ಲಿರುವ ಸೂಚನೆಯನ್ನು ಅರ್ಥ ಮಾಡಿಕೊಳ್ಳಲು ನಮಗೆ ಎಚ್ಚರಿಸುವವರೊಂದಿಗೆ ತೆರೆಯುತ್ತದೆ". ಈ ಪ್ರವಾದನೆಯ ಮಾತುಗಳನ್ನು ಓದುವವನು ಮತ್ತು ಕೇಳುವವನು ಧನ್ಯನು" ಎಂದು ದೇವರು ಘೋಷಿಸಿದ್ದಾರೆ ಮತ್ತು ಅದರಲ್ಲಿ ಬರೆಯಲಾದ ವಿಷಯಗಳನ್ನು ಇಟ್ಟುಕೊಳ್ಳಿ : ಸಮಯವು ಹತ್ತಿರದಲ್ಲಿದೆ. ಈ ಪುಸ್ತಕವು ನಮಗೇನು ಅರ್ಥ ಕೊಡುತ್ತದೆಂಬುದನ್ನು ಜನರು ಅರ್ಥಮಾಡಿಕೊಂಡಾಗ, ನಮ್ಮಲ್ಲಿ ದೊಡ್ಡ ಪುನರುಜ್ಜೀವನವನ್ನು ಕಾಣಬಹುದು. ನಮಗೆ ಕಲಿಸುವ ಮತ್ತು ಅಧ್ಯಯನ ಮಾಡಲು ನಮಗೆ ನೀಡಿದ ಎಚ್ಚರಿಕೆಯ ಹೊರತಾಗಿಯೂ, ಕಲಿಸುವ ಪಾಠಗಳನ್ನು ಸಂಪೂರ್ಣವಾಗಿ ನಾವು ಅರ್ಥೈಸಿಕೊಳ್ಳಲಾಗುವುದಿಲ್ಲ. ಎಲೆನ್ ಜಿ ವೈಟ್, ಟೆಸ್ಟಿಮೋನಿಸ್ ಟು ಮಿನಿಸ್ಟರ್ಸ್ ಮತ್ತು ಗಾಸ್ಪೆಲ್ ವರ್ಕರ್ಸ್, ಪುಟ 113.

ನಾವು ಈ ಪುಸ್ತಕವನ್ನು ವಿಶ್ಲೇಷಿಸಿದಾಗ, ನಮ್ಮ ಕರ್ತನಾದ ಯೇಸುಕ್ರಿಸ್ತನ ಆಗಮನಕ್ಕಾಗಿ ಕಾಯುತ್ತಿರುವಂತೆ, ನೀವು ಕೇಳಬೇಕಾದ ವಿಷಯಗಳ ಬಗ್ಗೆ ತಿಳಿದುಕೊಳ್ಳಲು ನಾವು ನಿಮ್ಮನ್ನು ಆಮಂತ್ರಿಸುತ್ತೇವೆ.

ರ್ಯಾಂಕೋ ಸ್ಟೆಫನೋವಿಕ್, ಪಿ.ಎಚ್.ಡಿಯವರು ಸೆವೆಂತ್–ಡೇ ಅಡ್ವೆಂಟಿಸ್ಟ್ ಥಿಯೋಲೋಜಿಕಲ್ ಸೆಮಿನರಿ, ಆಂಡ್ರ್ಯೂ ಯುನಿವರ್ಸಿಟಿಯಲ್ಲಿ ಹೊಸ ಒಡಂಬಡಿಕೆಯ ಪ್ರಾಧ್ಯಾಪಕರಾಗಿದ್ದಾರೆ. ಪ್ರಕಟನೆ ಪುಸ್ತಕವು ಅವರ ವಿಶೇಷತೆಯಾಗಿದೆ.